Paper : I

Subject : GENERAL PAPER

Subject Code : 00

Roll No. | | | | | | | | |

(Figures as per admission card)

OMR Sheet No. : ____________

Ali Hebbal

Booklet Code

**W**

BOOKLET SERIAL NO. 532473

**Name & Signature of Invigilator/s**

Signature : ____________

Name : ____________

Time : 1 Hour

Maximum Marks : 100

Number of Pages in this Booklet : 16

Number of Questions in this Booklet : 50

### ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಐವತ್ತು (50) ಬಹು ಆಯ್ಕೆ ವಿಧದ ಪ್ರಶ್ನೆಗಳನ್ನೊಳಗೊಂಡಿದೆ.
3. ಪರೀಕ್ಷೆ ಪ್ರಾರಂಭವಾದಾಗ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆಪುಸ್ತಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು, ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ, ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   ಉದಾಹರಣೆ : (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಈ ಪ್ರಶ್ನೆ ಪತ್ರಿಕೆಯ ಜೊತೆಯಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು. OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMRನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.
12. ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.
13. ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.
14. ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.

### Instructions for the Candidates

1. Write your roll number in the space provided on the top of this page.
2. This paper consists of fifty(50) multiple-choice type of questions.
3. At the commencement of examination, the question booklet will be given to you. In the first 5 minutes, you are requested <u>to open the booklet and compulsorily examine it as below</u> :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.

   **Example :** (A) (B) ● (D)

   where (C) is the correct response.
5. **Your responses to the questions are to be indicated in the OMR Sheet kept inside this Booklet.** If you mark at any place other than in the circles, the OMR Sheet will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space provided for the relevant entries, which may disclose your identity, you will render yourself liable to disqualification.
9. You have to return the OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

ಪು.ತಿ.ನೋ./P.T.O.

1. ಒಂದು ಕಚೇರಿಯಲ್ಲಿ 20 ಮಂದಿ ಕೆಲಸ ಮಾಡುತ್ತಿದ್ದಾರೆ. 5 ಮಂದಿಯ ಮೊದಲ ತಂಡ ಪೂರ್ವಾಹ್ನ 8.00 ರಿಂದ ಅಪರಾಹ್ನ 2.00 ರ ಅವಧಿಯಲ್ಲಿ ಕೆಲಸ ಮಾಡುತ್ತಾರೆ. 10 ಮಂದಿಯ ಎರಡನೆಯ ತಂಡ ಪೂರ್ವಾಹ್ನ 10.00 ರಿಂದ ಅಪರಾಹ್ನ 4.00ರ ಅವಧಿಯಲ್ಲಿ ಮತ್ತು 5 ಮಂದಿಯ ಮೂರನೆಯ ತಂಡ ಅಪರಾಹ್ನ 12.00 ರಿಂದ ಅಪರಾಹ್ನ 6.00ರ ಅವಧಿಯಲ್ಲಿ ಕೆಲಸ ಮಾಡುತ್ತಾರೆ. ಕಚೇರಿಯಲ್ಲಿ 5 ಕಂಪ್ಯೂಟರ್‌ಗಳಿದ್ದು ಎಲ್ಲಾ ಜನರು ಆಗಾಗ ಉಪಯೋಗಿಸುತ್ತಾರೆ. ಕೆಳಗಿನ ಯಾವ ಅವಧಿಯಲ್ಲಿ ಕಂಪ್ಯೂಟರ್‌ಗಳು ಹೆಚ್ಚು ಬಳಕೆಯಾಗುತ್ತವೆ ?
(A) ಪೂರ್ವಾಹ್ನ 10.00 ರಿಂದ ಅಪರಾಹ್ನ 12.00
(B) ಅಪರಾಹ್ನ 12.00 ರಿಂದ ಅಪರಾಹ್ನ 2.00
(C) ಅಪರಾಹ್ನ 2.00 ರಿಂದ ಅಪರಾಹ್ನ 4.00
(D) ಅಪರಾಹ್ನ 4.00 ರಿಂದ ಅಪರಾಹ್ನ 6.00

2. ಸರಣಿಯಿಂದ ತಪ್ಪಿಹೋಗಿರುವ ಸಂಖ್ಯೆಯನ್ನು ಹುಡುಕಿ :
4, 7, 11, 18, 29, 47, ?, 123, 199
(A) 76 (B) 70
(C) 84 (D) 102

Ali Hebbal

3. ಒಂದು ರೈಲು ನಿಲ್ದಾಣದಲ್ಲಿ ಒಬ್ಬ ಪುರುಷ, ಒಬ್ಬ ಮಹಿಳೆಗೆ ಹೇಳಿದನು, 'ಒಂದು ರೈಲು ಪ್ರತಿ 1 ಗಂಟೆ 45 ನಿಮಿಷಕ್ಕೆ ನವ ಜಲಪೈಗುರಿಯಿಂದ ಹೊರಡುತ್ತದೆ. ಹಿಂದಿನ ರೈಲು 50 ನಿಮಿಷಗಳ ಹಿಂದೆ ಹೊರಟಿದೆ ಮತ್ತು ಮುಂದಿನ ರೈಲು ಅಪರಾಹ್ನ 5.15ಕ್ಕೆ ಹೊರಡಲಿದೆ.' ಯಾವ ಹೊತ್ತಿಗೆ ಈ ಮಾಹಿತಿಯನ್ನು ಆ ಮಹಿಳೆಗೆ ನೀಡಲಾಯಿತು ?
(A) ಅಪರಾಹ್ನ 3.30 (B) ಅಪರಾಹ್ನ 4.20
(C) ಅಪರಾಹ್ನ 4.25 (D) ಅಪರಾಹ್ನ 4.00

4. ಒಂದು ವೇಳೆ 'FALSEHOOD' ಎಂಬ ಪದದ ಮೊದಲನೆಯ, ಎರಡನೆಯ, ನಾಲ್ಕನೆಯ ಮತ್ತು ಐದನೆಯ ಅಕ್ಷರಗಳಿಂದ ಅರ್ಥಪೂರ್ಣ ಪದವೊಂದನ್ನು ರಚಿಸಲು ಸಾಧ್ಯವಾಗುವುದಾದರೆ ಬಲಭಾಗದಿಂದ ಮೂರನೆಯ ಅಕ್ಷರ ಯಾವುದು ? ಒಂದು ವೇಳೆ ಒಂದಕ್ಕಿಂತ ಹೆಚ್ಚು ಪದಗಳನ್ನು ರಚಿಸಬಹುದಾದರೆ ನಿಮ್ಮ ಉತ್ತರವನ್ನು 'M' ಎಂದೂ ಮತ್ತು ಒಂದು ವೇಳೆ ಯಾವುದೇ ಪದವನ್ನು ರಚಿಸಲು ಅಸಾಧ್ಯವೆಂದಾದರೆ ನಿಮ್ಮ ಉತ್ತರವನ್ನು 'X' ಎಂದು ಸೂಚಿಸಿ.
(A) E (B) A
(C) X (D) M

5. ಒಬ್ಬ ಮಹಿಳೆ ಉತ್ತರಕ್ಕೆ 12 ಕಿ.ಮೀ., ಅನಂತರ ದಕ್ಷಿಣಕ್ಕೆ 6 ಕಿ.ಮೀ. ನಂತರ ಪೂರ್ವಕ್ಕೆ 8 ಕಿ.ಮೀ. ಓಡುತ್ತಾಳೆ. ಹಾಗಾದರೆ ಅವಳು ತನ್ನ ಆರಂಭಿಕ ಸ್ಥಾನದಿಂದ ಯಾವ ದಿಕ್ಕಿನಲ್ಲಿ ಎಷ್ಟು ದೂರದಲ್ಲಿದ್ದಾಳೆ ?
(A) 5 ಕಿ.ಮೀ., ಈಶಾನ್ಯ
(B) 5 ಕಿ.ಮೀ., ಪೂರ್ವ
(C) 10 ಕಿ.ಮೀ., ಈಶಾನ್ಯ
(D) 10 ಕಿ.ಮೀ., ಪೂರ್ವ

6. ಜೀವವೈವಿಧ್ಯದ ನಷ್ಟವು ಏನನ್ನು ಸೂಚಿಸುತ್ತದೆ ?
(A) ಪ್ರಾಣಿ ಪ್ರಭೇದಗಳ ಕುಸಿತ
(B) ಇಂಗಾಲಪಾತ
(C) ವಿವಿಧ ಜೀವ ಜಾತಿಗಳಲ್ಲಿನ ಕುಸಿತ
(D) ಸಸ್ಯ ಜಾತಿಗಳಲ್ಲಿನ ಬೃಹತ್ ನಷ್ಟ

7. WHO ಪ್ರಕಾರ ಕೋವಿಡ್ – 19ಕ್ಕೆ ಕಾರಣವಾಗುವ ವೈರಸ್ ಯಾವುದು ?
(A) MERS – CoV
(B) SARS – CoV
(C) SARS – CoV – 2
(D) MERS

# GENERAL PAPER
## Paper – I

1. There are twenty people working in an office. The first group of five workers work during 8.00 a.m. to 2.00 p.m. The second group of ten workers work during 10.00 a.m. to 4.00 p.m. and the third group of five workers work during 12.00 noon to 6.00 p.m. There are five computers in the office which all the employees frequently use. During which of the following hours, the computers are likely to be used most ?

(A) 10.00 a.m. to 12.00 noon

(B) 12.00 noon to 2.00 p.m.

(C) 2.00 p.m. to 4.00 p.m.

(D) 4.00 p.m. to 6.00 p.m.

Ali Hebbal

2. Find the missing number in the series :

4, 7, 11, 18, 29, 47, ?, 123, 199

(A) 76 (B) 70

(C) 84 (D) 102

3. At a railway station, a man said to a woman, 'a train leaves for New Jalpaiguri after every 1.45 hours. The last train has already left 50 minutes ago and the next train will leave at 5.15 p.m.' At what time, this information was given to the woman ?

(A) 3.30 p.m. (B) 4.20 p.m.

(C) 4.25 p.m. (D) 4.00 p.m.

4. If it is possible to make a meaningful word from the first, second, fourth and fifth letters of the word 'FALSEHOOD', then which will be the third letter from the right ? Give your answer as 'M', if more than one word can be formed and if no word can be formed, then give your answer as 'X'.

(A) E (B) A

(C) X (D) M

5. A lady runs 12 kms towards North, then 6 kms towards South and then 8 kms towards East. How far is she from her starting point and in which direction ?

(A) 5 kms, North – East

(B) 5 kms, East

(C) 10 kms, North – East

(D) 10 kms, East

6. What refers to loss of biodiversity ?

(A) Decline in animal species

(B) Carbon sinks

(C) Decline in variety of living species

(D) Huge loss of plant species

7. According to WHO, which is the virus that causes COVID – 19 ?

(A) MERS – CoV

(B) SARS – CoV

(C) SARS – CoV – 2

(D) MERS

8. ಇವುಗಳಲ್ಲಿ ಭಾರತ ಉತ್ಪಾದಿಸಿದ ಕೋವಿಡ್ ಲಸಿಕೆ ಯಾವುದು ?
(A) ಮೋಡರ್ನ
(B) ಸ್ಪುಟ್ನಿಕ್ ವಿ
(C) ಕೊರೊನಾ ವಾಕ್
(D) ಕೊವ್ಯಾಕ್ಸಿನ್


9. ________ ಹೊತ್ತಿಗೆ SDGಗಳಿಗೆ ಸಾಧಿಸುವುದಕ್ಕೆ ನಿರ್ದಿಷ್ಟ ಗುರಿಗಳಿವೆ.
(A) 2022
(B) 2040
(C) 2030
(D) 2025

10. ಕೆಳಗೆ ಎರಡು ವಾಕ್ಯಗಳಿವೆ ಒಂದನ್ನು ಪ್ರತಿಪಾದನೆ (A) ಮತ್ತು ಇನ್ನೊಂದನ್ನು ಕಾರಣ (R) ಎಂದು ಸೂಚಿಸಲಾಗಿದೆ.
**ಪ್ರತಿಪಾದನೆ (A) :** ಲಸಿಕೆಗಳು ಮಾರಣಾಂತಿಕ ರೋಗಗಳಿಂದ ಹಲವು ಜೀವಗಳನ್ನು ಪ್ರತಿಬಂಧಿಸುತ್ತವೆ ಮತ್ತು ರಕ್ಷಿಸುತ್ತವೆ.
**ಕಾರಣ (R) :** ಅವು ನಮ್ಮ ದೇಹದೊಳಗೆ ರೋಗವನ್ನುಂಟುಮಾಡುವ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳ ಪ್ರವೇಶವನ್ನು ತಡೆಯುತ್ತವೆ.
ಈ ಮೇಲಿನ ಹೇಳಿಕೆಗಳ ಸಂದರ್ಭದಲ್ಲಿ, ಕೆಳಗಿನವುಗಳಲ್ಲಿ ಯಾವುದು ಸತ್ಯ ?
**ಸಂಕೇತಗಳು :**
(A) (A) ಮತ್ತು (R) ಗಳೆರಡೂ ಸತ್ಯ ಮತ್ತು (R) ಎಂಬುದು (A) ಎಂಬುದರ ಸಮರ್ಪಕ ವಿವರಣೆಯಾಗಿದೆ
(B) (A) ಮತ್ತು (R) ಗಳೆರಡೂ ಸತ್ಯ, ಆದರೆ (R) ಎಂಬುದು (A) ಎಂಬುದರ ಸಮರ್ಪಕ ವಿವರಣೆಯಲ್ಲ
(C) (A) ಎಂಬುದು ಸತ್ಯ, ಆದರೆ (R) ಎಂಬುದು ಸುಳ್ಳು
(D) (A) ಎಂಬುದು ಸುಳ್ಳು, ಆದರೆ (R) ಎಂಬುದು ಸತ್ಯ

11. ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ SHOOT ಎಂಬುದನ್ನು 21 – 10 – 17 – 17 – 22 ಎಂದು ಸಂಕೇತಿಸಲಾಗಿದೆ. ನೀವು TELLY ಎಂಬುದನ್ನು ಅದೇ ಸಂಕೇತ ಭಾಷೆಯಲ್ಲಿ ಹೇಗೆ ಸಂಕೇತಿಸುವಿರಿ ?
(A) 18 – 10 – 12 – 12 – 2
(B) 22 – 7 – 20 – 14 – 6
(C) 22 – 5 – 14 – 14 – 25
(D) 22 – 7 – 14 – 14 – 27


12. ಒಂದು ಬುಟ್ಟಿಯಲ್ಲಿ ಇರಿಸಲಾಗಿರುವ ಹೂಗಳು ಪ್ರತಿ ನಿಮಿಷಕ್ಕೆ ದ್ವಿಗುಣಗೊಳ್ಳುತ್ತದೆ. ಒಂದು ವೇಳೆ ಆ ಬುಟ್ಟಿಯು 30 ನಿಮಿಷ ಒಳಗೆ ಹೂಗಳಿಂದ ತುಂಬಿಕೊಂಡರೆ, ಎಷ್ಟು ನಿಮಿಷಗಳಲ್ಲಿ ಬುಟ್ಟಿಯು $1/4$ ಭಾಗ ಹೂಗಳಿಂದ ತುಂಬಿಕೊಳ್ಳುತ್ತದೆ ?
(A) $15/2$ ನಿಮಿಷಗಳು
(B) 15 ನಿಮಿಷಗಳು
(C) 28 ನಿಮಿಷಗಳು
(D) $45/2$ ನಿಮಿಷಗಳು

13. ಈ ಕೆಳಗಿನ ವೆನ್ ರೇಖಾಚಿತ್ರವನ್ನು ಅಧ್ಯಯನ ಮಾಡಿ ಮತ್ತು ವಿದ್ಯಾವಂತರಾದ ಮತ್ತು ಉದ್ಯೋಗಸ್ಥರಾದ ಆದರೆ ದೃಢೀಕರಿಸದ ವ್ಯಕ್ತಿಗಳನ್ನು ಪ್ರತಿನಿಧಿಸುವ ವಲಯವನ್ನು ಕಂಡುಹಿಡಿಯಿರಿ.




(A) A, C
(B) A, B, C
(C) B, D
(D) B, E, D

14. ನೀಡಲಾಗಿರುವ ಆಕೃತಿಯಲ್ಲಿ 'P' ವಲಯವು ಕಷ್ಟಪಟ್ಟು ದುಡಿಯುವ ಜನರನ್ನು ಪ್ರತಿನಿಧಿಸುತ್ತದೆ. 'Q' ವಲಯವು ಬುದ್ಧಿವಂತ ಜನರನ್ನು ಪ್ರತಿನಿಧಿಸುತ್ತದೆ. 'R' ವಲಯವು ಸತ್ಯವಂತರಾದ ಜನರನ್ನು ಪ್ರತಿನಿಧಿಸುತ್ತದೆ ಮತ್ತು 'S' ವಲಯವು ಪ್ರಾಮಾಣಿಕ ಜನರನ್ನು ಪ್ರತಿನಿಧಿಸುತ್ತದೆ. ಯಾವ ವಲಯವು ಬುದ್ಧಿವಂತರಾದ, ಪ್ರಾಮಾಣಿಕರಾದ ಮತ್ತು ಸತ್ಯವಂತರಾದ ಆದರೆ ಕಷ್ಟಪಟ್ಟು ದುಡಿಯದ ಜನರನ್ನು ಪ್ರತಿನಿಧಿಸುತ್ತದೆ ?




(A) 6
(B) 7
(C) 8
(D) 5

Ali Hebbal

8. Which of these is India manufactured COVID vaccine ?
(A) Moderna (B) Sputnik V
(C) Corona Vac (D) COVAXIN

9. SDGs have specific targets to be achieved by
(A) 2022 (B) 2040
(C) 2030 (D) 2025

10. Given below are two statements, one is labelled as Assertion (A) and the other labelled as Reason (R).

**Assertion (A)** : Vaccines prevent and save many lives from life threatening diseases.

**Reason (R)** : They prevent the entry of disease causing bacteria and virus into our body.

In the context of the above statements, which of the following is correct ?

**Codes :**

(A) Both (A) and (R) are true and (R) is the correct explanation of (A)
(B) Both (A) and (R) are true, but (R) is not the correct explanation of (A)
(C) (A) is true, but (R) is false
(D) (A) is false, but (R) is true

11. In a certain code language, SHOOT has been coded as 21 – 10 – 17 – 17 – 22. How will you code TELLY in the same code language ?


(A) 18 – 10 – 12 – 12 – 2
(B) 22 – 7 – 20 – 14 – 6
(C) 22 – 5 – 14 – 14 – 25
(D) 22 – 7 – 14 – 14 – 27

Ali Hebbal

12. The flowers kept in the basket doubles in every one minute. If the basket gets completely full by flowers in 30 minutes, then in how many minutes $\frac{1}{4}^{th}$ of the basket was filled with flowers ?


(A) $\frac{15}{2}$ minutes
(B) 15 minutes
(C) 28 minutes
(D) $\frac{45}{2}$ minutes

13. Study the following Venn diagram and find the region representing persons who are educated and employed but not confirmed.




(A) A, C (B) A, B, C
(C) B, D (D) B, E, D

14. In the given figure, circle 'P' represents hard-working people, circle 'Q' represents intelligent people, circle 'R' represents truthful people and circle 'S' represents honest people. Which region represents the people who are intelligent, honest and truthful but not hard-working ?




(A) 6 (B) 7
(C) 8 (D) 5

15. ಒಂದು ವೇಳೆ 'ಕೆಂಪು' ಎಂಬುದನ್ನು 'ಗಾಳಿ' ಎಂದು ಕರೆದರೆ, 'ಗಾಳಿ'ಯನ್ನು 'ಕಪ್ಪು' ಎಂದು ಕರೆದರೆ, 'ಕಪ್ಪನ್ನು' 'ಆಕಾಶ' ಎಂದು ಕರೆದರೆ, 'ಆಕಾಶ'ವನ್ನು 'ನೀಲಿ' ಎಂದು ಕರೆದರೆ, 'ನೀಲಿ'ಯನ್ನು 'ಮಾರುತ'ವೆಂದು ಕರೆದರೆ ಮತ್ತು 'ಮಾರುತ'ವನ್ನು 'ಬಿಳಿ' ಎಂದು ಕರೆದರೆ, 'ಆಕಾಶ'ದ ಬಣ್ಣ ಯಾವುದು ?

(A) ಬಿಳಿ (B) ಕಪ್ಪು
(C) ನೀಲಿ (D) ಕೆಂಪು

16. ಬೋಧನೆಯ ಪರಿಣಾಮಕಾರಿತ್ವಕ್ಕೆ ಕಾರಣವಾಗುವ ಸಕಾರಾತ್ಮಕ ಅಂಶಗಳನ್ನು ಒಳಗೊಂಡಿರುವ ಪರ್ಯಾಯವನ್ನು ಆರಿಸಿ.

a. ವಿಷಯದ ಮೇಲಿನ ಶಿಕ್ಷಕರ ಜ್ಞಾನ
b. ಶಿಕ್ಷಕರ ಸಮಾಜೋ–ಆರ್ಥಿಕ ಹಿನ್ನೆಲೆ
c. ಶಿಕ್ಷಕರ ಸಂವಹನ ಕೌಶಲ
d. ವಿದ್ಯಾರ್ಥಿಗಳನ್ನು ಸಂತೋಷಪಡಿಸುವ ಶಿಕ್ಷಕರ ಸಾಮರ್ಥ್ಯ
e. ವಿದ್ಯಾರ್ಥಿಗಳೊಂದಿಗೆ ಶಿಕ್ಷಕರ ವೈಯಕ್ತಿಕ ಸಂಪರ್ಕ
f. ತರಗತಿ ಕೊಠಡಿಗಳಲ್ಲಿನ ವ್ಯವಹಾರಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಶಿಕ್ಷಕರ ಸಾಮರ್ಥ್ಯ

(A) b, c ಮತ್ತು d (B) c, d ಮತ್ತು e
(C) a, d ಮತ್ತು e (D) a, c ಮತ್ತು f

17. ಘಟಕಪರೀಕ್ಷೆಗಳು, ವರ್ಗ ಪರೀಕ್ಷೆಗಳು ಮತ್ತು ನಿಯೋಜನಾ ಪರೀಕ್ಷೆಗಳು _____ ದ ಅಗತ್ಯ ಘಟಕಗಳಾಗಿವೆ.

(A) ಸಾರಾಂಶ ಮೌಲ್ಯಮಾಪನ
(B) ವಿಶ್ಲೇಷಣಾತ್ಮಕ ಮೌಲ್ಯಮಾಪನ
(C) ನಿರಂತರ ಮೌಲ್ಯಮಾಪನ
(D) ನೈದಾನಿಕ ಮೌಲ್ಯಮಾಪನ

18. ತತ್ತ್ವಶಾಸ್ತ್ರದ ಯಾವ ಶಾಖೆಯು ಜ್ಞಾನ, ಅದರ ಸ್ವರೂಪ, ವಿಧಾನ ಮತ್ತು ಸಿಂಧುತ್ವಗಳೊಂದಿಗೆ ವ್ಯವಹರಿಸುತ್ತದೆ ?

(A) ತರ್ಕಶಾಸ್ತ್ರ
(B) ಸೌಂದರ್ಯಶಾಸ್ತ್ರ
(C) ಜ್ಞಾನಶಾಸ್ತ್ರ
(D) ತಾತ್ತ್ವಿಕ ಸಿದ್ಧಾಂತ

19. ಈ ಕೆಳಗಿನವುಗಳಲ್ಲಿ ಅತ್ಯುನ್ನತ ಅರಿವಿನ ಸಾಮರ್ಥ್ಯ ಯಾವುದು ?

(A) ತಿಳಿಯುವುದು
(B) ಅರ್ಥಮಾಡಿಕೊಳ್ಳುವುದು
(C) ವಿಶ್ಲೇಷಿಸುವುದು
(D) ಮೌಲ್ಯಮಾಪನ ಮಾಡುವುದು

20. ತರಗತಿ ಕೊಠಡಿಯಲ್ಲಿನ ಬೋಧನೆಯು _____ ನ ಒಂದು ವಿಧ.

(A) ಮಾಹಿತಿಯ ಏಮ್ಮುಖ ವಿತರಣೆ
(B) ಕೇವಲ ಪಾತ್ರ ನಿರ್ವಹಣೆ
(C) ಅಮೌಖಿಕ ಸಂವಹನ
(D) ಸಂಭಾಷಣೆ

21. ಕೆಳಗೆ ಎರಡು ವಾಕ್ಯಗಳಿವೆ ಒಂದನ್ನು ಪ್ರತಿಪಾದನೆ (A) ಮತ್ತು ಇನ್ನೊಂದನ್ನು ಕಾರಣ (R) ಎಂದು ಸೂಚಿಸಲಾಗಿದೆ.

**ಪ್ರತಿಪಾದನೆ (A)** : ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಮತ್ತು ಸೃಜನಾತ್ಮಕ ಆಲೋಚನಾ ಅರ್ಹತೆಗಳನ್ನು ಬೆಳೆಸುವುದೇ ಉನ್ನತ ಶಿಕ್ಷಣದ ಉದ್ದೇಶವಾಗಿದೆ.

**ಕಾರಣ (R)** : ಅವರ ಸಾಮರ್ಥ್ಯಗಳು ಉದ್ಯೋಗ ನಿಯೋಜನೆಯನ್ನು ಖಚಿತಪಡಿಸುತ್ತವೆ.

ಈ ಮೇಲಿನ ಹೇಳಿಕೆಗಳ ಸಂದರ್ಭದಲ್ಲಿ, ಕೆಳಗಿನವುಗಳಲ್ಲಿ ಯಾವುದು ಸತ್ಯ ?

**ಸಂಕೇತಗಳು :**

(A) (A) ಮತ್ತು (R) ಗಳೆರಡೂ ಸತ್ಯ ಮತ್ತು (R) ಎಂಬುದು (A) ಎಂಬುದರ ಸಮರ್ಪಕ ವಿವರಣೆಯಾಗಿದೆ
(B) (A) ಮತ್ತು (R) ಗಳೆರಡೂ ಸತ್ಯ, ಆದರೆ (R) ಎಂಬುದು (A) ಎಂಬುದರ ಸಮರ್ಪಕ ವಿವರಣೆಯಲ್ಲ
(C) (A) ಎಂಬುದು ಸತ್ಯ, ಆದರೆ (R) ಎಂಬುದು ಸುಳ್ಳು
(D) (A) ಎಂಬುದು ಸುಳ್ಳು, ಆದರೆ (R) ಎಂಬುದು ಸತ್ಯ.

Ali Hebbal

15. If 'red' is called 'air', 'air' is called 'black', 'black' is called 'sky', 'sky' is called 'blue', 'blue' is called 'wind' and 'wind' is called 'white'. Then what is the colour of 'sky' ?

(A) White (B) Black
(C) Blue (D) Red

16. Select the alternative which consists of positive factors contributing to effectiveness of teaching.

a. Teacher's knowledge of the subject
b. Teacher's socio-economic background
c. Communication skills of the teacher
d. Teacher's ability of pleasing the students
e. Teacher's personal contact with students
f. Teacher's competence in managing and monitoring classroom transactions

(A) b, c and d (B) c, d and e
(C) a, d and e (D) a, c and f

17. Unit tests, class tests and assignment tests are essential components of

(A) Summative evaluation
(B) Analytical evaluation
(C) Continuous evaluation
(D) Diagnostic evaluation

18. Which branch of philosophy deals with knowledge, its structure, method and validity ?

(A) Logic
(B) Aesthetics
(C) Epistemology
(D) Metaphysics

19. Which of the following is the highest level of cognitive ability ?

(A) Knowing
(B) Understanding
(C) Analysing
(D) Evaluating

20. Classroom teaching is a type of

(A) One way delivery of information
(B) Only role playing
(C) Non-verbal communication
(D) Discourse

21. Given below are two statements, one is labelled as Assertion (A) and the other labelled as Reason (R).

**Assertion (A) :** The purpose of higher education is to promote critical and creative thinking abilities among students.

**Reason (R) :** Their abilities ensure job placements.

In the context of the above statements, which of the following is correct ?

**Codes :**

(A) Both (A) and (R) are true and (R) is the correct explanation of (A)
(B) Both (A) and (R) are true, but (R) is not the correct explanation of (A)
(C) (A) is true, but (R) is false
(D) (A) is false, but (R) is true

Ali Hebbal

22. _______ ಮೂಲಕ ಮೌಲ್ಯ ಶಿಕ್ಷಣವನ್ನು ನೀಡುವುದೇ ಉತ್ತಮ ಮಾರ್ಗವಾಗಿದೆ.
(A) ಆಧ್ಯಾತ್ಮಿಕ ಪಠ್ಯಗಳ ಮೇಲಿನ ಚರ್ಚೆಗಳು
(B) ಮೌಲ್ಯಗಳ ಮೇಲಿನ ಉಪನ್ಯಾಸಗಳು/ ಚರ್ಚೆಗಳು
(C) ಮೌಲ್ಯಗಳ ಮೇಲೆ ವಿಚಾರಸಂಕಿರಣಗಳು/ ವಿಚಾರಗೋಷ್ಠಿ
(D) ಮೌಲ್ಯಗಳ ಮೇಲೆ ಮಾರ್ಗದರ್ಶನ/ ಪರ್ಯಾಲೋಚನಾ ಸಭೆಗಳು

23. ಈ ಕೆಳಗಿನವುಗಳಲ್ಲಿ ಯಾವುದು NEP 2020 ರ ಪ್ರಮುಖ ಲಕ್ಷಣವಲ್ಲ ?
(A) ಗ್ರೇಡ್ 3 ರಿಂದ ಎಲ್ಲಾ ವಿದ್ಯಾರ್ಥಿಗಳು ತಳಮಟ್ಟದ ಸಾಕ್ಷರತೆ ಮತ್ತು ಗಣಿತಜ್ಞತೆಯಲ್ಲಿ ಸಾಧಿಸುವುದಕ್ಕೆ ಹೆಚ್ಚಿನ ಆದ್ಯತೆ
(B) ತಮ್ಮ ಕಲಿಕಾ ಉದ್ದೇಶ ಮತ್ತು ಕಾರ್ಯಕ್ರಮಗಳ ಆಯ್ಕೆಯಲ್ಲಿ ಶಿಕ್ಷಣಾರ್ಥಿಗಳ ನಮ್ಯತೆ
(C) ಕಲಿಸುವಿಕೆ ಮತ್ತು ಕಲಿಕೆಯಲ್ಲಿ ಬಹುಭಾಷಿಕತೆ ಮತ್ತು ಭಾಷಾ ಶಕ್ತಿಯನ್ನು ಉತ್ತೇಜಿಸುವುದು
(D) ಕಲಿಕೆಯ ನಿಯಮಿತವಾದ ರಚನಾತ್ಮಕ ಮೌಲ್ಯಮಾಪನಕ್ಕಿಂತ ಸಾರಾಂಶ ಮೌಲ್ಯಮಾಪನಕ್ಕೆ ಗಮನಹರಿಸುವುದು

24. ಈ ಕೆಳಗಿನವುಗಳಲ್ಲಿ ಯಾವುದು ಪ್ರಧಾನ್ ಮಂತ್ರಿ ಮುದ್ರಾ ಯೋಜನೆಯ ಫಲಶ್ರುತಿಯಲ್ಲ ?
(A) ಶಿಶು (B) ನಾರಿ
(C) ಕಿಶೋರ್ (D) ತರುಣ್

25. NIRF ಎಂದರೆ
(A) ನ್ಯಾಷನಲ್ ಇಂಟೆಗ್ರೇಟೆಡ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್
(B) ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್
(C) ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರಿಸರ್ಚ್ ಫ್ರೇಮ್‌ವರ್ಕ್
(D) ನ್ಯಾಷನಲ್ ಇಂಟೆಗ್ರೇಟೆಡ್ ರಿಸರ್ಚ್ ಫ್ರೇಮ್‌ವರ್ಕ್

26. ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿನ ಸಂಶೋಧನೆಯ ಹೆಜ್ಜೆಗಳಲ್ಲಿ ಯಾವ ಅನುಕ್ರಮ ತರ್ಕಬದ್ಧವಾಗಿದೆ ?
(A) ಸಮಸ್ಯೆಯ ಸೂತ್ರೀಕರಣ, ದತ್ತಾಂಶ ವಿಶ್ಲೇಷಣೆ, ಸಂಶೋಧನಾ ವಿನ್ಯಾಸಗಳ ಅಭಿವೃದ್ಧಿ, ಕಲ್ಪನೆಯ ಸೂತ್ರೀಕರಣ, ದತ್ತಾಂಶ ಸಂಗ್ರಹ, ಸಾಧಾರಣೀಕರಣಕ್ಕೆ ಆಗಮಿಸುವುದು ಮತ್ತು ಮುಕ್ತಾಯ
(B) ಸಮಸ್ಯೆಯ ಸೂತ್ರೀಕರಣ, ಕಲ್ಪನೆಯ ಸೂತ್ರೀಕರಣ, ಸಂಶೋಧನಾ ವಿನ್ಯಾಸಗಳ ಅಭಿವೃದ್ಧಿ, ದತ್ತಾಂಶ ಸಂಗ್ರಹ, ದತ್ತಾಂಶ ವಿಶ್ಲೇಷಣೆ, ಸಾಧಾರಣೀಕರಣಕ್ಕೆ ಆಗಮಿಸುವುದು ಮತ್ತು ಮುಕ್ತಾಯ
(C) ಸಂಶೋಧನಾ ವಿನ್ಯಾಸಗಳ ಅಭಿವೃದ್ಧಿ, ಕಲ್ಪನೆಯ ಸೂತ್ರೀಕರಣ, ಸಮಸ್ಯೆಯ ಸೂತ್ರೀಕರಣ, ದತ್ತಾಂಶ ವಿಶ್ಲೇಷಣೆ, ದತ್ತಾಂಶ ಸಂಗ್ರಹ, ಸಾಧಾರಣೀಕರಣಕ್ಕೆ ಆಗಮಿಸುವುದು ಮತ್ತು ಮುಕ್ತಾಯ
(D) ದತ್ತಾಂಶ ಸಂಗ್ರಹ, ಸಂಶೋಧನಾ ವಿನ್ಯಾಸಗಳ ಅಭಿವೃದ್ಧಿ, ದತ್ತಾಂಶ ವಿಶ್ಲೇಷಣೆ, ಸಮಸ್ಯೆಯ ಸೂತ್ರೀಕರಣ, ಕಲ್ಪನೆಯ ಸೂತ್ರೀಕರಣ, ಸಾಧಾರಣೀಕರಣಕ್ಕೆ ಆಗಮಿಸುವುದು ಮತ್ತು ಮುಕ್ತಾಯ

27. ನೆಟ್ನೋಗ್ರಾಫಿ ಎಂದರೇನು ?
(A) ಡಿಜಿಟಲ್ ಅನ್ವೇಷಣೆ
(B) ನೆಟಿಜನ್‌ಗಳ ಮಾರುಕಟ್ಟೆ ಸಂಶೋಧನೆ
(C) ಸಾಮಾಜಿಕ ಮಾಧ್ಯಮ ಸಂಶೋಧನೆ
(D) ಆನ್‌ಲೈನ್ ಜನಾಂಗಶಾಸ್ತ್ರದ ಸಂಶೋಧನೆ

28. ಇವುಗಳಲ್ಲಿ ಫ್ರೆಡ್ ಎನ್. ಕೆರ್ಲಿಂಗರ್ ಬರೆದಿರುವ ಪುಸ್ತಕ ಯಾವುದು ?
(A) ಫೌಂಡೇಷನ್ಸ್ ಆಫ್ ಬಿಹೇವ್ಯರಲ್ ರಿಸರ್ಚ್
(B) ಮೆತಡ್ಸ್ ಇನ್ ಸೋಶಿಯಲ್ ರಿಸರ್ಚ್
(C) ಸೈಂಟಿಫಿಕ್ ಸೋಶಿಯಲ್ ಸರ್ವೇಸ್ ಆ್ಯಂಡ್ ರಿಸರ್ಚ್
(D) ಸೋಶಿಯಾಲಾಜಿಕಲ್ ರಿಸರ್ಚ್ ಮೆತಡ್ಸ್

29. ಶೂನ್ಯ ಕಲ್ಪನೆ ಎಂದರೆ
(A) ವ್ಯತ್ಯಾಸವಿಲ್ಲದಿರುವ ಕಲ್ಪನೆ
(B) ಶೂನ್ಯದ ಮೌಲ್ಯವನ್ನು ವ್ಯತ್ಯಾಸಸಾಧ್ಯಕ್ಕೆ ವಿನ್ಯಾಸಗೊಳಿಸುವ ಕಲ್ಪನೆ
(C) ಶೂನ್ಯ ಮಹತ್ವದ ಕಲ್ಪನೆ
(D) ಸಾಬೀತುಪಡಿಸದ ಅಥವಾ ನಿರಾಕರಿಸದ ಕಲ್ಪನೆ

Ali Hebbal

22. The best way for providing value education is through
(A) Discussions on spiritual texts
(B) Lectures/discussions on values
(C) Seminars/symposia on values
(D) Mentoring/reflective sessions on values

23. Which of the following is not a salient feature of NEP 2020 ?
(A) Highest priority to achieving foundational literacy and numeracy by all students by Grade 3
(B) Learners' flexibility to choose their learning objectives and programmes
(C) Promoting multilingualism and the power of language in teaching and learning
(D) Focus on summative assessment rather than the regular formative assessment of learning

24. Which of the following is not a product of Pradhan Mantri Mudra Yojana ?
(A) Shishu (B) Naari
(C) Kishore (D) Tarun

Ali Hebbal

25. NIRF stands for
(A) National Integrated Ranking Framework
(B) National Institutional Ranking Framework
(C) National Institutional Research Framework
(D) National Integrated Research Framework

26. Which sequence of research steps is logical in the list given below ?
(A) Problem formulation, data analysis, development of research design, hypothesis formulation, collection of data, arriving at generalisations and conclusions
(B) Problem formulation, hypothesis formulation, development of research design, collection of data, data analysis, arriving at generalisations and conclusions
(C) Development of research design, hypothesis formulation, problem formulation, data analysis, collection of data, arriving at generalisations and conclusions
(D) Collection of data, development of research design, data analysis, problem formulation, hypothesis formulation, arriving at generalisations and conclusions

27. What is Netnography ?
(A) Digital investigation
(B) Market research of netizens
(C) Social media research
(D) Online ethnography research

28. Which one of these books is authored by Fred N. Kerlinger ?
(A) Foundations of Behavioural Research
(B) Methods in Social Research
(C) Scientific Social Surveys and Research
(D) Sociological Research Methods

29. A null hypothesis is
(A) Hypothesis of no difference
(B) Hypothesis that assigns value of zero to the variable
(C) Hypothesis of zero significance
(D) Hypothesis which can neither be proved nor disproved

**30.** ಸಂಶೋಧನ ಸಮಸ್ಯೆಯೊಂದು ವೈವಿಧ್ಯಮಯ ಜನಸಂಖ್ಯೆಗೆ ಸಂಬಂಧಿಸಿದ್ದಾಗ ಈ ಕೆಳಗಿನ ಮಾದರಿ ವಿಧಾನಗಳಲ್ಲಿ ಯಾವುದು ಅತ್ಯಂತ ಸೂಕ್ತವಾಗಿದೆ ?

(A) ಸಮುದಾಯ ಮಾದರಿ

(B) ಶ್ರೇಣೀಕೃತ ಮಾದರಿ

(C) ಅನುಕೂಲಕರ ಮಾದರಿ

(D) ಸರಳ ಯಾದೃಚ್ಛಿಕ ಮಾದರಿ

**31.** ಅಪೇಕ್ಷಿಸದ ಇ-ಮೇಲ್, ಸಂದೇಶವನ್ನು ಒಂದೇ ಬಾರಿಗೆ ಹಲವು ಸ್ವೀಕೃತಿದಾರರಿಗೆ ಕಳುಹಿಸಿದರೆ ಅದೊಂದು

(A) ವರ್ಮ್ (B) ವೈರಸ್

(C) ತ್ರೆಟ್ (D) ಸ್ಪ್ಯಾಮ್

**32.** ಸಂಕೇತ ಮತ್ತು ತಂತಿಗಳ ನಡುವಿನ ವ್ಯತ್ಯಾಸವೇನು ?

(A) ಸಂಕೇತವು ಸಂಪೂರ್ಣವಾಗಿ ಮುಕ್ತ ವಿಷಯವಾಗಿದೆ

(B) ತಂತಿಯು ಸಂಪೂರ್ಣವಾಗಿ ಮುಕ್ತ ವಿಷಯವಾಗಿದೆ

(C) ಸಂಕೇತವು ದತ್ತಾಂಶಗಳ ಜೊತೆಗೆ ದೂರವಾಣಿ ಸಂಖ್ಯೆಯನ್ನು ಸಂಗ್ರಹಿಸುತ್ತದೆ

(D) ತಂತಿ ದತ್ತಾಂಶವು ದೂರವಾಣಿ ಸಂಖ್ಯೆಯೊಂದಿಗೆ ಲಿಂಕ್ ಆಗಿಲ್ಲ

**33.** ಭಾರತದ ಅತಿದೊಡ್ಡ ಟಿವಿ ಪ್ರಯೋಗ ಯಾವುದು ?

(A) ಗ್ರಾಮ್‌ಸ್ಯಟ್

(B) ಜಬೂಆ - ಜೆ.ಡಿ.ಸಿ.ಪಿ.

(C) ಖೇಡ ಕಮ್ಯುನಿಕೇಶನ್ ಪ್ರಾಜೆಕ್ಟ್

(D) ಸೈಟ್

**34.** ರಾಷ್ಟ್ರೀಯ ಮಾಹಿತಿ ಕೇಂದ್ರವು ವಾಟ್ಸಾಪ್‌ನ ಮೂಲಕ 2021ರ ಫೆಬ್ರವರಿಯಲ್ಲಿ ತ್ವರಿತ ಒಸಗೆಯನ್ನು ಕಳುಹಿಸುವ ವೇದಿಕೆಯನ್ನು (ಆ್ಯಪ್) ಪ್ರಾರಂಭಿಸಿತು. ಆದರ ಆ್ಯಪ್ ಅನ್ನು ಗುರುತಿಸಿ.

(A) ಸಂದೇಶ್ (B) ವಾರ್ತಾ

(C) ಸಹಯೋಗ್ (D) ಖಬರ್

**35.** ಡ್ಯಾಶ್‌ಬೋರ್ಡ್ ಎಂದರೇನು ?

(A) ಇದೊಂದು ಸ್ಕೋರ್‌ಕಾರ್ಡ್

(B) ಮಾಹಿತಿ ನಿರ್ವಹಣಾ ಸಲಕರಣೆ

(C) ಆರೋಗ್ಯ ಮಾಹಿತಿ ನಿರ್ವಹಣಾ ಸಲಕರಣೆ

(D) ಕ್ಲೌಡ್ ಸ್ಟೋರೇಜ್

ಈ ಕೆಳಗಿನ ವಾಕ್ಯವೃಂದವನ್ನು ಓದಿರಿ ಹಾಗೂ ನಿಮ್ಮ ಅರ್ಥೈಸುವಿಕೆಯ ಆಧಾರದ ಮೇಲೆ **36** ರಿಂದ **40** ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಹೆಸರಾಂತ ಸಂಪಾದಕ - ರಾಜಕಾರಣಿ ಎಂ.ಜೆ. ಅಕ್ಬರ್ ಇವರು ಹೂಡಿದ ಮಾನನಷ್ಟ ಮೊಕದ್ದಮೆಯಲ್ಲಿ ದೆಹಲಿ ನ್ಯಾಯಾಲಯವೊಂದು ಪತ್ರಿಕೋದ್ಯಮಿ ಪ್ರಿಯಾ ರಮಣಿಯನ್ನು ಖುಲಾಸೆಗೊಳಿಸಿರುವುದು ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದಿಂದ ಪಾರಾಗಿ ಬಂದ ಮಹಿಳೆಯರಿಗೆ ಗಟ್ಟಿಯಾಗಿ ಮಾತನಾಡಲು ಧೈರ್ಯ ತುಂಬಿದೆ. ''ದಶಕಗಳ ನಂತರವೂ ತನ್ನ ಅಳಲನ್ನು ತನ್ನ ಆಯ್ಕೆಯ ಯಾವುದೇ ವೇದಿಕೆಯಲ್ಲಿ ಪ್ರಸ್ತುತಪಡಿಸಲು ಮಹಿಳೆಗೆ ಒಂದು ಹಕ್ಕು ಇದೆ'' ಎಂದು, ಗಮನಾರ್ಹ ಸಮಯ ಕಳೆದ ನಂತರ ತಮ್ಮ ಮಹಿಳೆಯರು #ಮೀಟೂ ಖಾತೆಗಳೊಂದಿಗೆ ಹೊರ ಬರುತ್ತಿರುವುದನ್ನು ಪ್ರಶ್ನಿಸುವವರನ್ನು ಮತ್ತು ಕಾನೂನು ಜಾರಿ ಆಡಳಿತ ಯಂತ್ರವನ್ನು ಬಿಟ್ಟು ಸಾಮಾಜಿಕ ಮಾಧ್ಯಮ ವೇದಿಕೆಗಳ ಸಂತ್ರಸ್ತೆಯರ ಆಯ್ಕೆಯನ್ನು ಪ್ರಶ್ನಿಸುವವರನ್ನು ನ್ಯಾಯಾಲಯವು ನೇರವಾಗಿ ಉತ್ತರಿಸುತ್ತಿತ್ತು.

Ali Hebbal

ನ್ಯಾಯಾಲಯವು ರಮಣಿ ಮತ್ತು ಅವರ ಸಹಪತ್ರಿಕೋದ್ಯಮಿ ಘಜಾಲಾ ವಾಹಬ್‌ರವರ ಸಾಕ್ಷ್ಯಗಳನ್ನು ನಂಬಿರುವುದರಿಂದ ಅನೇಕ ಮಹಿಳೆಯರ ವಿಶ್ವಾಸ ವೃದ್ಧಿಗೊಂಡಿದೆ. ಸಮಾಜದಿಂದ ನಂಬಲ್ಪಡುವುದಕ್ಕೆ, ಸಾಮಾಜಿಕ ಕಳಂಕವನ್ನು ಪ್ರತಿಭಟಿಸುವುದಕ್ಕೆ, ದುರುಪಯೋಗವನ್ನು ಗುರುತಿಸುವುದಕ್ಕೆ ಮತ್ತು ತನ್ನನ್ನು ತಾನು ಮನದಟ್ಟು ಮಾಡಿಕೊಳ್ಳಲು, ಮಾನಸಿಕ ಆಘಾತವನ್ನು ಮೆಟ್ಟಿನಿಂತು ದುರುಪಯೋಗಿಯನ್ನು ಬಹಿರಂಗಪಡಿಸುವ ವಿಶ್ವಾಸ ಹೊಂದಲು ಮಹಿಳೆಯು ನಡೆಸಿದ ಹೋರಾಟವು ತೀರ್ಪಿನಲ್ಲಿ ಸರಿಯಾಗಿಯೇ ಉಲ್ಲೇಖವನ್ನು ಕಂಡುಕೊಂಡಿದೆ. ''ಮಾನನಷ್ಟದ ಕ್ರಿಮಿನಲ್ ದೂರಿನ ನೆಪದಲ್ಲಿ ಲೈಂಗಿಕ ದುರುಪಯೋಗದ ವಿರುದ್ಧ ಧ್ವನಿ ಎತ್ತುವುದಕ್ಕೆ ಮಹಿಳೆಯನ್ನು ಶಿಕ್ಷಿಸುವಂತಿಲ್ಲ, ಏಕೆಂದರೆ ಭಾರತದ ಸಂವಿಧಾನದಿಂದ ಖಾತ್ರಿಗೊಳಿಸಲ್ಪಟ್ಟಿರುವ ಜೀವದ ಹಕ್ಕು ಮತ್ತು ಮಹಿಳೆಯ ಘನತೆಯ ವೆಚ್ಚ ತೆತ್ತು ಪ್ರಸಿದ್ಧಿಯ ಹಕ್ಕು ರಕ್ಷಿಸಲ್ಪಡುವುದಿಲ್ಲ'' ಎಂದು ಎಸಿಎಂಎಂ ಆರ್.ಕೆ. ಪಾಂಡೆ ಬರೆದರು.

ಅನ್ಯಾಯಕ್ಕೊಳಗಾದ ಸಂತ್ರಸ್ತೆಯರ ಮತ್ತು ಮುಕ್ತ ಪತ್ರಿಕೋದ್ಯಮದ ಬಾಯಿ ಮುಚ್ಚಿಸುವ ಪ್ರತಿಬಂಧಕ ಕಾನೂನು ನಿಬಂಧನೆಯನ್ನು ಬದಿಗೊತ್ತಿ ಮೂಲಭೂತ ಹಕ್ಕುಗಳನ್ನು ವಿಶೇಷ ಸವಲತ್ತಾಗಿ ನ್ಯಾಯಾಲಯ ಪರಿಗಣಿಸಿರುವುದು ಪ್ರೋತ್ಸಾಹದಾಯಕವಾಗಿದೆ. ರಮಣಿಯನ್ನು ಪ್ರಶಂಸೆಗೆ ಅರ್ಹವಾಗಿಸುವಂತೆ, ದೀರ್ಘಾವಧಿಯ ಕಾನೂನು ಹೋರಾಟವನ್ನು ಸೇರುವಲ್ಲಿ ಆಕೆ ಹಿಂದಡಿ ಇಡಲಿಲ್ಲ. ಲೈಂಗಿಕ ಪೀಡನೆ ಮತ್ತು ಮಹಿಳೆಯ ಸುರಕ್ಷಿತತೆಯ ಬಗೆಗಿನ ಮಾತು ಸರ್ವೋಚ್ಚ ನ್ಯಾಯಾಲಯವು 1997 ರಲ್ಲಿ ವಿಶಾಕಾ

30. When a research problem is related to heterogeneous population, which of the following is the most suitable sampling method ?
    (A) Cluster sampling
    (B) Stratified sampling
    (C) Convenient sampling
    (D) Simple random sampling

31. An unsolicited e-mail, message sent to many recipients at once, is a
    (A) Worm (B) Virus
    (C) Threat (D) Spam

32. What is the difference between Signal and Telegram ?
    (A) Signal is a fully open source
    (B) Telegram is fully open source
    (C) Signal collects data along with phone number
    (D) Telegram data not linked to phone number

33. Which is the largest TV experiment of India ?
    (A) GRAMSAT
    (B) Jhabua – JDCP
    (C) Kheda Communication Project
    (D) SITE

34. The National Informatics Centre launched an instant messaging platform (app.) on the lines of WhatsApp in February 2021. Identify the app.
    (A) Sandesh (B) Varta
    (C) Sahyog (D) Khabar

35. What is Dashboard ?
    (A) It is a scorecard
    (B) Information Management Tool
    (C) Health Information Management Tool
    (D) Cloud storage

Ali Hebbal

Read the passage given below and answer the questions from 36 to 40 based on your understanding of the passage.

A Delhi court's acquittal of journalist Priya Ramani in the criminal defamation complaint filed by celebrity editor – politician M.J. Akbar will embolden women survivors of sexual harassment at workplaces to speak up. "The woman has a right to put her grievance at any platform of her choice and even after decades," the court said, directly answering those who questioned women coming out with their #MeToo accounts after considerable passage of time, and those who questioned their choice of social media platforms rather than law enforcement mechanisms to air grievances.

Many women will gain confidence from the court believing the testimonies of Ramani and fellow journalist Ghazala Wahab on their harassment. The woman's struggle to be believed by society, to resist social stigma, to convince herself to recognise the abuse, to overcome the mental trauma and gain confidence to expose the abuser have rightly found mention in the judgment. "The woman cannot be punished for raising voice against the sex abuse on the pretext of criminal complaint of defamation as the right of reputation cannot be protected at the cost of the right of life and dignity of woman as guaranteed by the Indian Constitution", wrote ACMM R.K. Pandey.

The court's privileging of fundamental rights over restrictive legal provisions like criminal defamation that silence victims of injustice and the free press is heartening. To Ramani's credit she didn't baulk at having to join a long legal fight. The conversation over sexual harassment and women's safety at workplaces has come a long way

ಮಾರ್ಗದರ್ಶಕ ಸೂತ್ರಗಳನ್ನು ರೂಪಿಸಿದಂದಿನಿಂದ ಬಹಳ ದೂರ ಸಾಗಿ ಬಂದಿರುತ್ತದೆ. 2013 ರಿಂದ ಭಾರತವು ಕೆಲಸದಾಣಗಳಲ್ಲಿ ಲೈಂಗಿಕ ಪೀಡನೆ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆಯನ್ನು ಹೊಂದಿರುತ್ತದೆ. ಇದು ಉದ್ಯೋಗದಾತರ ಮೇಲೆ ಶಾಸನಬದ್ಧ ಹೊಣೆಗಾರಿಕೆಗಳನ್ನು ಹೇರುತ್ತದೆ ಮತ್ತು ಲೈಂಗಿಕ ಕಿರುಕುಳವನ್ನು ಅಪರಾಧವಾಗಿ ಪರಿಗಣಿಸುವ, ಸುಸ್ಪಷ್ಟವಾಗಿ ವ್ಯಾಖ್ಯಾನಿಸಲ್ಪಟ್ಟ ದಂಡಾರ್ಹ ವಿಧಿಯನ್ನು ಒಳಗೊಂಡಿರುತ್ತದೆ (ಐಪಿಸಿ ಪ್ರಕರಣ 354A).

ಹೀಗಿದ್ದೂ, ಮಹಿಳೆಯರಿಗೆ ಇದು ಇನ್ನೂ ದೀರ್ಘ ಹಾಗೂ ಏಕಾಂಗಿತನದ ಮಾರ್ಗವಾಗಿರುತ್ತದೆ ಏಕೆಂದರೆ, ಪೀಡಕ ಹೆಚ್ಚು ಕಡಿಮೆ ಯಾವಾಗಲೂ ಸಂಘಟನೆಯಲ್ಲಿ ಹೆಚ್ಚಿನ ಅಧಿಕಾರ ಹಾಗೂ ಪ್ರಭಾವವುಳ್ಳ ಓರ್ವ ಹಿರಿಯನಾಗಿರುತ್ತಾನೆ. ತಾನು ತನ್ನ ಹೋರಾಟದಲ್ಲಿ ಎದುರಿಸಬೇಕಾಗಿ ಬಂದ ಉದ್ವಿಗ್ನತೆ, ಒತ್ತಡ ಮತ್ತು ಭಯ ಅಂತೆಯೇ ಆಪಾದಿತಳಾಗಿ ನ್ಯಾಯಾಲಯದಲ್ಲಿ ತಾನು ನಿಲ್ಲಬೇಕಾಗಿ ಬಂದ ವ್ಯಂಗ್ಯವನ್ನು ರಮಣಿ ವರದಿಗಾರರಿಗೆ ತಿಳಿಸುತ್ತಾರೆ. ಆಕೆಯ 'ಸ್ವ-ರಕ್ಷಣೆ' ಕಾರ್ಯದ ಸಂಕ್ಷಿಪ್ತ ಆದರೆ ಶಕ್ತಿಯುತ ಗುರುತಿಸುವಿಕೆ ಮತ್ತು ವಿಳಂಬಿಸಿದ ದೂರುದಾರರ ಬಗ್ಗೆ ತೀರ್ಪಿನ ತಾದಾತ್ಮ್ಯಾನುಭೂತಿ - ಲೈಂಗಿಕ ಪೀಡನೆ ಅಥವಾ ಹಿಂಸೆಯ ಮಾನಸಿಕ ಆಘಾತವನ್ನು ನಿಭಾಯಿಸುವಲ್ಲಿ ಸಂತ್ರಸ್ತೆಯರ ಸಂಕಷ್ಟವನ್ನು ಗಣನೆಗೆ ತೆಗೆದುಕೊಳ್ಳದೆ ಅವರನ್ನು ಕುಗ್ಗಿಸುವ, ಸೂಕ್ಷ್ಮಗ್ರಾಹಿತ್ವವಿಲ್ಲದೆ ವೊರೆಹೋದದ್ದು - ರಣಕಹಳೆಯ ಮತ್ತೊಂದು ಕ್ಷಣವಾಗಬಹುದು.

36. ಮೇಲಿನ ವಾಕ್ಯವೃಂದಕ್ಕೆ ಅತ್ಯಂತ ಸಮರ್ಪಕವಾದ ಶೀರ್ಷಿಕೆ ಯಾವುದು ?
(A) ಎಂ. ಜೆ. ಅಕ್ಬರ್ ಸೋತ ಮಾನಹಾನಿ ಪ್ರಕರಣ
(B) ಮಹಿಳಾ ಸಬಲೀಕರಣಕ್ಕೆ ಗೆಲುವು
(C) ಪ್ರಿಯಾ ರಮಣಿ ತನ್ನ ಹೋರಾಟದಲ್ಲಿ ಗೆದ್ದರು
(D) # ಮಿಟೂಗೆ ಗೆಲುವು

37. ತಮ್ಮ ಅಳಲನ್ನು ಪ್ರಸಾರಮಾಡುವ ಮಹಿಳೆಯರ ಹಕ್ಕುಗಳ ಬಗ್ಗೆ ಈ ವಾಕ್ಯವೃಂದ ಏನು ಹೇಳುತ್ತದೆ ?
(A) ಎಂ. ಜೆ. ಅಕ್ಬರ್ ಅವರ ಪ್ರಸಿದ್ಧಿಯನ್ನು ಕಾಪಾಡಬೇಕಾಗುತ್ತದೆ
(B) ಮಹಿಳೆಯರು ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಬಳಸಿಕೊಳ್ಳಬಹುದು
(C) ಮಹಿಳೆಯರು ಕಾನೂನು ಜಾರಿ ಕಾರ್ಯವಿಧಾನವನ್ನು ಬಳಸಿಕೊಳ್ಳುತ್ತಾರೆ
(D) ಲೈಂಗಿಕ ಕಿರುಕುಳ ಅಪರಾಧಗಳಲ್ಲಿ ಮಹಿಳೆಯರಿಗೆ ವಿಶೇಷ ಸವಲತ್ತುಗಳಿವೆ

38. ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆಯ ಬಗ್ಗೆ ನ್ಯಾಯಾಲಯ ಏನು ಹೇಳಿದೆ ?
(A) ಕಾಯ್ದೆಯ ಬಗ್ಗೆ ಜನರಿಗೆ ಆಳವಾದ ಅರಿವಿದೆ
(B) ಉದ್ಯೋಗದಾತರು 1997 ರ ವಿಶಾಕಾ ಮಾರ್ಗಸೂಚಿಯನ್ನು ಅನುಷ್ಠಾನಕ್ಕೆ ತಂದಿದ್ದಾರೆ
(C) ಇದು ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳವನ್ನು ಅಪರಾಧೀಕರಿಸಿದೆ
(D) ಇಂತಹ ಸಂದರ್ಭಗಳಲ್ಲಿ ಉದ್ಯೋಗದಾತರು ಉಪಕ್ರಮಗಳನ್ನು ತೆಗೆದುಕೊಂಡಿದ್ದಾರೆ

39. ತೀರ್ಪಿನ ಸಾರಾಂಶವೇನು ?
(A) ಕ್ರಿಮಿನಲ್ ಮಾನಹಾನಿ ಪ್ರಕರಣವು ದೂರು ನೀಡುವ ಮಹಿಳೆಯರ ಹಕ್ಕನ್ನು ಮೊಟಕುಗೊಳಿಸುವುದಿಲ್ಲ
(B) ಬಲಿಪಶು ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿಯನ್ನು ದೂಷಿಸಲು ಸಾಧ್ಯವಿಲ್ಲ
(C) ಮಾನಹಾನಿಯು ಅನ್ಯಾಯದ ಬಲಿಪಶುಗಳನ್ನು ಮೌನಗೊಳಿಸುತ್ತದೆ
(D) ಮಾನಹಾನಿಯ ಪ್ರಕರಣಗಳು ವಾಕ್ ಸ್ವಾತಂತ್ರ್ಯದ ಹಕ್ಕನ್ನು ಪ್ರಶ್ನಿಸುತ್ತದೆ

Ali Hebbal

40. ವಾಕ್ಯವೃಂದದ ಪ್ರಕಾರ ಈ ಕೆಳಗಿನವುಗಳಲ್ಲಿ ಯಾವುದನ್ನು ತೀರ್ಪಿನಲ್ಲಿ ಉಲ್ಲೇಖಿಸಲಾಗಿಲ್ಲ ?
(A) ಸಾಮಾಜಿಕ ಕಳಂಕವನ್ನು ವಿರೋಧಿಸುವುದನ್ನು
(B) ಮಾನಸಿಕ ಆಘಾತಕ್ಕೆ ಬಲಿಯಾಗುವುದನ್ನು
(C) ನಿಂದಿಸುವವರನ್ನು ಬಹಿರಂಗಗೊಳಿಸಲು ಆತ್ಮವಿಶ್ವಾಸ ಗಳಿಸುವುದನ್ನು
(D) ಮಹಿಳೆಯ ಜೀವನ ಮತ್ತು ಘನತೆಯ ವೆಚ್ಚತೆತ್ತು ನಿಂದಿಸುವವರ ಪ್ರಸಿದ್ಧಿಯು ರಕ್ಷಿಸಲ್ಪಡುವುದಿಲ್ಲ

since Supreme Court framing the Vishaka guidelines in 1997. Since 2013, India has the Sexual Harassment at Workplaces (Prevention, Prohibition and Redressal) Act placing statutory responsibilities upon employers and a clearly defined penal provision criminalising sexual harassment (IPC Section 354A).

Yet, it is still a long, lonely path for women because the harasser is almost always a senior in the organisation, enjoying great power and influence. Ramani told reporters of having to deal with anxiety, stress and fear in her fight as well as the irony of her having to stand in court as the accused. The verdict's succinct yet powerful recognition of her act of "self-defence" and its empathy towards late complainants – invoked insensitively to detract victims without recognising their difficulty of coping with the trauma of sexual harassment or violence – may well become another clarion call moment.

36. Which is the most appropriate title for the above passage ?
(A) M.J. Akbar loses defamation case
(B) Win for women's empowerment
(C) Priya Ramani wins her battle
(D) Win for #MeToo

37. What does the passage say about women's rights to air their grievances ?
(A) M.J. Akbar's reputation should also be protected
(B) Women can use social media platforms
(C) Women shall use law enforcement mechanisms
(D) Women have special privileges in sexual harassment offenses


38. What did the Court say about Sexual Harassment at Workplaces (Prevention, Prohibition and Redressal) Act ?
(A) People's Awareness of Act is high
(B) Employers have implemented Vishaka guidelines of 1997
(C) It has criminalized sexual harassment at workplaces
(D) Employers have taken initiatives in such cases

Ali Hebbal

39. What is the essence of judgement ?
(A) Criminal defamation case doesn't curtail woman's right to complain
(B) Victim cannot defame accuser in social media
(C) Defamation silences victims of injustice
(D) Defamation cases challenges right to freedom of speech

40. Which of the following did not find any mention in the verdict as per the passage ?
(A) To resist social stigma
(B) To succumb to mental trauma
(C) Gain confidence to expose the abuser
(D) Reputation of the abuser cannot be protected at the cost of life and dignity of women

ನಿರ್ದೇಶನ : ಕೆಳಗೆ ನೀಡಲಾಗಿರುವ ದತ್ತಾಂಶವನ್ನು ಆಧಾರವಾಗಿಟ್ಟುಕೊಂಡು 41 – 45ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ :




| ಕಂಪೆನಿ | ಅಧಿಕಾರಿಗಳು : ಕಾರ್ಮಿಕರು |
|---|---|
| A | 1 : 35 |
| B | 1 : 20 |
| C | 1 : 15 |

ಒಟ್ಟು ಕಾರ್ಮಿಕರು – 1200

41. ಕಂಪೆನಿ A ಮತ್ತು ಕಂಪೆನಿ Bಯಲ್ಲಿನ ಒಟ್ಟು ಕಾರ್ಮಿಕರ ಸಂಖ್ಯೆ ಹಾಗೂ ಕಂಪೆನಿ A ಮತ್ತು ಕಂಪೆನಿ Bಯಲ್ಲಿನ ಒಟ್ಟು ಅಧಿಕಾರಿಗಳ ಸಂಖ್ಯೆಯ ಅನುಪಾತವನ್ನು ಕಂಡುಹಿಡಿಯಿರಿ.
(A) 25 : 1 (B) 18 : 1
(C) 1 : 23 (D) 1 : 16

42. ಕಂಪೆನಿ 'B' ಯಲ್ಲಿರುವ ಒಟ್ಟು ಉದ್ಯೋಗಿಗಳ ಸಂಖ್ಯೆಯು ಕಂಪೆನಿ 'C' ಯಲ್ಲಿನ ಒಟ್ಟು ಉದ್ಯೋಗಿಗಳ ಸಂಖ್ಯೆಗಿಂತ ________ ಹೆಚ್ಚಿದೆ.
(A) 200 (B) 180
(C) 184 (D) 172

43. ಮೂರು ಕಂಪೆನಿಗಳಲ್ಲಿರುವ ಅಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು?
(A) 56 (B) 66
(C) 72 (D) 84

44. ಕಂಪೆನಿ 'A' ಮತ್ತು ಕಂಪೆನಿ 'C' ಯಲ್ಲಿನ ಉದ್ಯೋಗಿಗಳ ಒಟ್ಟು ಸಂಖ್ಯೆಯಲ್ಲಿನ ವ್ಯತ್ಯಾಸವೆಂದರೆ
(A) 119 (B) 112
(C) 118 (D) 114

45. ಕಂಪೆನಿ 'B' ಮತ್ತು ಕಂಪೆನಿ 'C' ಯಲ್ಲಿನ ಅಧಿಕಾರಿಗಳ ಸಂಖ್ಯೆಯಲ್ಲಿನ ವ್ಯತ್ಯಾಸವೆಂದರೆ
(A) 4 (B) 5
(C) 8 (D) 12

46. ಕೆಳಗೆ ಎರಡು ವಾಕ್ಯಗಳಿವೆ ಒಂದನ್ನು ಪ್ರತಿಪಾದನೆ (A) ಮತ್ತು ಇನ್ನೊಂದನ್ನು ಕಾರಣ (R) ಎಂದು ಸೂಚಿಸಲಾಗಿದೆ.
**ಪ್ರತಿಪಾದನೆ (A) :** ಔಪಚಾರಿಕ ಸಂವಹನವು ತ್ವರಿತ ಹಾಗೂ ಹೊಂದಿಕೊಳ್ಳುವಂತಹುದು.
**ಕಾರಣ (R) :** ಔಪಚಾರಿಕ ಸಂವಹನವು ಒಂದು ಮಾಹಿತಿಯ ವ್ಯವಸ್ಥಿತವಾದ ಮತ್ತು ಕ್ರಮಬದ್ಧವಾದ ಹರಿವು.
ಈ ಮೇಲಿನ ಹೇಳಿಕೆಗಳ ಸಂದರ್ಭದಲ್ಲಿ, ಕೆಳಗಿನವುಗಳಲ್ಲಿ ಯಾವುದು ಸತ್ಯ ?
**ಸಂಕೇತಗಳು :**
(A) (A) ಮತ್ತು (R) ಗಳೆರಡೂ ಸತ್ಯ, ಮತ್ತು (R) ಎಂಬುದು (A) ಎಂಬುದರ ಸಮರ್ಪಕ ವಿವರಣೆಯಾಗಿದೆ
(B) (A) ಮತ್ತು (R) ಗಳೆರಡೂ ಸತ್ಯ, ಆದರೆ (R) ಎಂಬುದು (A) ಎಂಬುದರ ಸಮರ್ಪಕ ವಿವರಣೆಯಲ್ಲ
(C) (A) ಎಂಬುದು ಸತ್ಯ, ಆದರೆ (R) ಎಂಬುದು ಸುಳ್ಳು
(D) (A) ಎಂಬುದು ಸುಳ್ಳು, ಆದರೆ (R) ಎಂಬುದು ಸತ್ಯ

47. ಏಕಕಾಲದಲ್ಲಿ ಬೃಹತ್ತಾದ, ವೈವಿಧ್ಯಮಯವಾದ, ವಿವಿಧ ಸ್ವರೂಪದ ಮತ್ತು ಚದುರಿಹೋಗಿರುವ ಪ್ರೇಕ್ಷಕರಿಗೆ ಏಕೈಕ ಮೂಲದಲ್ಲಿ ಮಾಹಿತಿಯನ್ನು ರವಾನಿಸುವ ಸಂವಹನದ ವಿಧಾನವನ್ನು ಹೀಗೆಂದು ಕರೆಯುತ್ತಾರೆ
(A) ಗುಂಪು ಸಂವಹನ
(B) ಸಮೂಹ ಸಂವಹನ
(C) ಆಂತರಿಕ ಸಂವಹನ
(D) ಸಾರ್ವಜನಿಕ ಸಂವಹನ


48. ಒಂದು ನೆಟ್‌ವರ್ಕ್‌ನೊಳಗೆ ಪ್ರಸಾರಕ್ಕಾಗಿ ದತ್ತಾಂಶವನ್ನು ಸಂಕೇತೀಕರಣ ಅಥವಾ ಅಸ್ತವ್ಯಸ್ತಗೊಳಿಸುವುದನ್ನು ಹೀಗೆಂದು ಕರೆಯುತ್ತಾರೆ
(A) ಪ್ರೊಟೆಕ್ಷನ್ (B) ಡಿಕ್ರಿಪ್ಷನ್
(C) ಎನ್‌ಕ್ರಿಪ್ಷನ್ (D) ಡಿಕೋಡಿಂಗ್

49. ಸೈದ್ಧಾಂತಿಕ ಸಂಕೇತಗಳು ನಮ್ಮ ಸಾಮೂಹಿಕ ________ ರೂಪಿಸುತ್ತವೆ.
(A) ಗ್ರಹಿಕೆ (B) ಬಳಕೆ
(C) ರಚನೆ (D) ಉತ್ಪಾದನೆ

50. ಟ್ವಿಟ್ಟರ್ ಹ್ಯಾಂಡಲ್ ಎಂದರೇನು ?
(A) ಟ್ವೀಟ್
(B) ಟ್ವಿಟ್ಟರ್ ಯುಆರ್‌ಎಲ್
(C) ಹ್ಯಾಶ್‌ಟ್ಯಾಗ್
(D) ಯೂಸರ್‌ನೇಮ್

Ali Hebbal

**Direction** : Answer the questions from **41 – 45** based on the data given below :




| Company | Officers : Workers |
|---|---|
| A | 1 : 35 |
| B | 1 : 20 |
| C | 1 : 15 |

Total workers – 1200

41. Find the ratio between total number of workers in Company A and Company B to total number of officers in Company A and Company B.
    (A) 25 : 1 (B) 18 : 1
    (C) 1 : 23 (D) 1 : 16

42. Total number of employees in Company 'B' exceeds the total number of employees in Company 'C' by
    (A) 200 (B) 180
    (C) 184 (D) 172

43. What is the total number of officers in the three companies ?
    (A) 56 (B) 66
    (C) 72 (D) 84

44. The difference between the total number of employees in Company 'A' and Company 'C' is
    (A) 119 (B) 112
    (C) 118 (D) 114

45. The difference in the number of officers in Company 'B' and Company 'C' is
    (A) 4 (B) 5
    (C) 8 (D) 12

46. Given below are two statements, one is labelled as Assertion (A) and the other labelled as Reason (R).

    **Assertion (A)** : Formal communication tends to be fast and flexible.

    **Reason (R)** : Formal communication is a systematic and orderly flow of information.

    In the context of the above statements, which of the following is correct ?

    **Codes** :
    (A) Both (A) and (R) are true and (R) is the correct explanation of (A)
    (B) Both (A) and (R) are true, but (R) is not the correct explanation of (A)
    (C) (A) is true, but (R) is false
    (D) (A) is false, but (R) is true

47. The mode of communication that involves a single source transmitting information to a large, diversified, heterogeneous and dispersed audience simultaneously, is called
    (A) Group Communication
    (B) Mass Communication
    (C) Intrapersonal Communication
    (D) Public Communication

48. Encoding or scrambling data for transmission across a network is known as
    (A) Protection (B) Decryption
    (C) Encryption (D) Decoding

49. Ideological codes shape our collective
    (A) Perceptions (B) Consumptions
    (C) Creations (D) Productions

50. What is Twitter handle ?
    (A) Tweet
    (B) Twitter URL
    (C) Hashtag
    (D) Username

Ali Hebbal